# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,  ಮೈಸೂರು.

**ಎಸ್.ಸಿ. ಸಂಖ್ಯೆ 8/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಎನ್ ಕಾರ್ತಿಕ್ | ಪಿಡಬ್ಲ್ಯೂ ಃ 2 |
| ತಂದೆಯ / ಗಂಡನ ಹೆಸರು | : ನಾಗೇಂದ್ರ | ಸಿಡಬ್ಲ್ಯೂ ಃ 2 |
| ವಯಸ್ಸು | : 32 ವರ್ಷ | |
| ಉದ್ಯೋಗ | : ಮನೆಕೆಲಸ | |
| ವಾಸಸ್ಥಳ | : ಕೆಸರೆ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 13.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ನನಗೆ ಜಹೀರ್ ಉದ್ದೀನ್ ಖಾನ್ ನವರ ಪರಿಚಯ ಇರುತ್ತದೆ. ಅವರು ನಮ್ಮ ಮನೆಯ ಬಳಿ ವಾಸಿಸುತ್ತಿದ್ದರು. ಜಹೀರ್ ಉದ್ದೀನ್ ಖಾನ್ ಕೂಲಿ ಕೆಲಸ ಮಾಡಿಕೊಂಡಿದ್ದು, ಆಟೋ ಕೂಡ ಓಡಿಸುತ್ತಿದ್ದನು. ನಾನು ಪೈಂಟ್ ಕೆಲಸ ಮಾಡಿಕೊಂಡಿರುತ್ತೇನೆ. ನಾವು ಸಾಮಾನ್ಯವಾಗಿ ಕೆಲಸಕ್ಕೆ ಹೋದಾಗ ಭೇಟಿಯಾಗುತ್ತಿದ್ದೆವು.

3. ಜಹೀರ್ ಉದ್ದೀನ್ ಖಾನ್ ಈಗ  ಜೀವಿತ ಇರುವುದಿಲ್ಲ. ಈಗ ಆತ 5 ವರ್ಷದ ಹಿಂದೆ ತೀರಿಕೊಂಡಿರುತ್ತಾನೆ. ದಿನಾಂಕ ನೆನಪಿರುವುದಿಲ್ಲ. ನಾನು ಬಲಮುರಿಯಿಂದ ನನ್ನ ದ್ವಿಚಕ್ರ ವಾಹನದಲ್ಲಿ ಮನೆಯ ಕಡೆಗೆ ಬರುತ್ತಿದ್ದೆನು. ಆಗ ಸಮಯ  ಬೆಳಗ್ಗೆ 11.30

ಆಗಿರಬಹುದು. ಜಿ ಆರ್ ಎಸ್ ಫ್ಯಾಂಟಸಿ ಪಾರ್ಕ್ ನಲ್ಲಿ ಜಹೀರ್ ಉದ್ದೀನ್ ಖಾನ್ ರವರು ನನಗೆ ಸಿಕ್ಕಿರುತ್ತಾರೆ. ಅವರು ಆಟೋದಲ್ಲಿ ಬರುತ್ತಿದ್ದರು. ನನ್ನ ದ್ವಿಚಕ್ರ ವಾಹನವನ್ನು ನಮ್ಮ ಸ್ನೇಹಿತ ಅಶೋಕನಿಗೆ ಕೊಟ್ಟು, ಜಹೀರ್ ಉದ್ದೀನ್ ಖಾನ್ ಗೆ ಆಟೋದಲ್ಲಿ ಮನೆಯ ಬಳಿ ಬಿಡಲು ಕೇಳಿಕೊಂಡಾಗ ಆತ ಕೂಡ ಮನೆಯ ಕಡೆಗೆ ಹೋಗುತ್ತಿದ್ದು, ನಾನು ಆಟೋವನ್ನು ಹತ್ತಿರುತ್ತೇನೆ.

4. ನಂತರ ಮೇಟಗಳ್ಳಿಯ ಮುಖ್ಯ ರಸ್ತೆಯಲ್ಲಿ ಆಟೋ ಪಲ್ಟಿಯಾಗಿದ್ದು, ಆಗ ನನಗೆ ತಲೆಗೆ ಭುಜಕ್ಕೆ ಮತ್ತು ಕಾಲಿನ ಬಳಿ ಏಟಾಗಿರುತ್ತದೆ. ನನ್ನನ್ನು ಆಸ್ಪತ್ರೆಗೆ ಪೊಲೀಸರು ಬಂದು ಕರೆದುಕೊಂಡು ಹೋಗಿರುತ್ತಾರೆ. ಜಹೀರ್ ಉದ್ದೀನ್ ಖಾನ್ ಗೂ ಸಹ ಬಹಳ ಏಟಾಗಿದ್ದು, ಆತನನ್ನು ಸಹ ಅಂಬೂಲೆನ್ಸ್ ನಲ್ಲಿ ಕರೆದುಕೊಂಡು ಹೋದರು. ಅಲ್ಲಿ ನಮ್ಮ ಮೇಲೆ ಯಾರು ಕೂಡ ಹಲ್ಲೆ ಮಾಡಿರುವುದಿಲ್ಲ. ನ್ಯಾಯಾಲಯದ ಮಂದೆ ಹಾಜರು ಇರುವ ಆರೋಪಿತರನ್ನು ನಾನು ನೋಡಿರುವುದಿಲ್ಲ.

5. ಜಹೀರ್ ಉದ್ದೀನ್ ಖಾನ್ ನನ್ನು ಆಸ್ಪತ್ರೆಗೆ ಸ್ವಲ್ಪ ಹೊತ್ತಿನಲ್ಲಿ ತೀರಿಕೊಂಡಿರುತ್ತಾನೆ ಎಂದು ತಿಳಿದು ಬಂದಿರುತ್ತದೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ**

6. ನನ್ನ ಮೇಲೆ ಕುರಿ, ಹಸು ಕಳ್ಳತನ ಮಾಡಿದ ಬಗ್ಗೆ ಪ್ರಕರಣ ಇರುವುದಿಲ್ಲ. ಜಹೀರ್ ಉದ್ದೀನ್ ಖಾನ್ ಮೇಲೆ ಇರಬಹುದು. ನನಗೂ ಮತ್ತು ಜಹೀರ್ ಉದ್ದೀನ್ ಖಾನ್ ನಿಗೂ ಮಧ್ಯಪಾನ ಮಾಡುವ ಅಭ್ಯಾಸ ಇತ್ತು, ಇಬ್ಬರೂ ಸಹ ಶಿವಸಾಗರ್ ಬಾರ್ ಬಳಿ ಭೇಟಿಯಾಗಿ ಮಧ್ಯಪಾನ ಮಾಡುತ್ತಿದ್ದವು ಎಂದರೆ ಸರಿಯಲ್ಲ.

7. ದಿ.19.01.2020 ರಂದು ಬೆಳಿಗ್ಗೆ ಸುಮಾರು 10.45 ಗಂಟೆಯಲ್ಲಿ ಹೋಟೆಲ್ ಸೇಲ್ ಬಾರ್ ಹತ್ತಿರ ನಡೆದುಕೊಂಡು ಹೋಗುತ್ತಿದ್ದಾಗ ಜಹೀರ್ ಉದ್ದೀನ್ ಖಾನ್ ಕೆ ಎಲ್ 10 ಡಿ 7303 ಆಟೋದಲ್ಲಿ ಬಂದು ಸ್ವಲ ಕೆಲಸವಿದೆ ಬಾ ಹೋಗಿ ಬರೋಣ ಎಂದು ಹೇಳಿ ಆಟೋ ಹತ್ತಿಸಿಕೊಂಡ ಎಂದರೆ ಸರಿಯಲ್ಲ. ಬನ್ನಿಮಂಟಪದ ಲಾವಣ್ಯ ಬಾರ್ ಹತ್ತಿರ ಹೋಗಿ ಮಧ್ಯವನ್ನು ತೆಗೆದುಕೊಂಡು ಇಬ್ಬರು ಮಧ್ಯವನ್ನು ಸೇವಿಸಿದೆವು ಎಂದರೆ ಸರಿಯಲ್ಲ. ಜಹೀರ್ ಉದ್ದೀನ್ ಖಾನ್ ಮೇಕೆಯನ್ನು ತರೋಣ ಬಾ ಎಂದು ಆಟೋವನ್ನು ಬೆಳವತ್ತ ಮೇನ್ ರೋಡ್ ನಲ್ಲಿ ಹೋಗುತ್ತಿದ್ದಾಗ ತೋಟದಲ್ಲಿ ಮೇಯುತ್ತಿದ್ದ ಮೇಕೆಗಳನ್ನು ನೋಡಿ ಜಹೀರ್ ಉದ್ದೀನ್ ಖಾನ್ ಆಟೋ ನಿಲ್ಲಿಸಿ ಇಬ್ಬರೂ ಕೆಳಗಡೆ ಇಳಿದೆವು ಎಂದರೆ ಸರಿಯಲ್ಲ. ಆಗ ಜಹೀರ್ ಉದ್ದೀನ್ ಖಾನ್ ತೋಟದಲ್ಲಿ ಮೇಯುತ್ತಿದ್ದ ಮೇಕೆಯನ್ನು ಹಿಡಿದು ಎಳೆದುಕೊಂಡು ಬಂದು ಆಟೋದ ಹಿಂದಕ್ಕೆ ಹಾಕಿಕೊಂಡನು. ಆಗ ಸಮಯ ಸುಮಾರು 11.45 ಆಗಿತ್ತು ಎಂದರೆ ಸರಿಯಲ್ಲ. ಇದನ್ನು ನೋಡಿದ ಯಾರೋ ಕಳ್ಳ ಕಳ್ಳ ಎಂದು ಕೂಗಿಕೊಂಡಿದ್ದರಿಂದ ತಕ್ಷಣವೇ ಅಲ್ಲಿಂದ ಆಟೋ ತೆಗೆದು ಜಹೀರ್ ಉದ್ದೀನ್ ಖಾನ್ ಫಾಸ್ಟ್ ಆಗಿ ಆಟೋ ಓಡಿಸಿಕೊಂಡು ರಿಂಗ್ ರಸ್ತೆಯ ಕಡೆಗೆ ಬರುವಾಗ ರಸ್ತೆ ತಿರುವಿನಲ್ಲಿ ಆಟೋ ಅಪಸೈಡ್ ಆಗಿ ಮಗುಚಿಕೊಂಡಿತು ಎಂದರೆ ಸರಿಯಲ್ಲ. ಜಹೀರ್ ಉದ್ದೀನ್ ಖಾನ್ ಆಟೋ ಎತ್ತು ಎಂದನು, ಅಷ್ಟರಲ್ಲಿ ಜನರು ನಮ್ಮ ಕಡೆಗೆ ಬರುತ್ತಿದ್ದನ್ನು ಕಂಡು

ನಾನು ಸ್ವಲ್ಪ ದೂರ ಹೋಗಿ ನಿಂತು ನೋಡಿದಾಗ ನಮ್ಮ ಹಿಂದೆ ಬಂದ 3–4 ಜನರು ಜಹೀರ್ ಉದ್ದೀನ್ ಖಾನ್ ಹಿಡಿದುಕೊಂಡು ಗುದ್ದಿ ಕಾಲುಗಳಿಂದ ಒದ್ದರು. ನಾನು ಅಲ್ಲಿಂದ ಓಡಿ ಹೋಗುತ್ತಿದ್ದಾಗ ಕಳ್ಳರು ಎಂದು ಅಲ್ಲಿ ಕಬ್ಬಡಿ ಆಡುತ್ತಿದ್ದ ಹುಡುಗರು ನನ್ನನ್ನು ಹಿಡಿದುಕೊಂಡರು. ನಂತರ ಒಬ್ಬ ಆಸಾಮಿ ಬಂದು ನನ್ನನ್ನು ಕೇಳಿದಾಗ ನನ್ನ ಬಗ್ಗೆ ಹೇಳಿರುತ್ತೇನೆ. ನಂತರ ಆತ ತಂದ ಸ್ಕೂಟರ್ ನಲ್ಲಿ ನಡುವೆ ಕೂರಿಸಿಕೊಂಡು ಆಟೋ ಬಿದ್ದ ಸ್ಥಳಕ್ಕೆ ಬಂದು ಅಲ್ಲಿ 3–4 ಜನರು ಸೇರಿಕೊಂಡು ನನ್ನ ತಲೆಗೆ , ಎಡಗಣ್ಣಿಗೆ ಹೊಡೆದು , ಮಾರಣಾಂತಿಕವಾಗಿ ಹಲ್ಲೆ ಮಾಡಿದರು. ಅದರಲ್ಲಿ ಒಬ್ಬ ಆಸಾಮಿ ಲೋ ಭರತ , ಶ್ರೀನಿವಾಸ, ರವಿ ಹೊಡೆಯ ಬೇಡಿ ಎಂದು ಹೇಳಿ, ಪೊಲೀಸರಿಗ ಒಪ್ಪಿಸೋಣ ಎಂದು ಜೂತೆಯಲ್ಲಿ ಇರಿಸಿಕೊಂಡರು. ಜಹೀರ್ ಉದ್ದೀನ್ ಖಾನ್ ಹೊಟ್ಟೆ ನೋವು ಎಂದು ಹೇಳಿ ಆಟೋಗೆ ಹೊರಗಿಕೊಂಡು ಕುಳಿತ. ನಂತರ 12.45 ಕ್ಕೆ ಪೊಲೀಸರು ಸ್ಥಳಕ್ಕೆ ಬಂದರು. ವಿಚಾರಿಸಿದರು. ಅಲ್ಲಿದ್ದವರು ಮೇಕೆ ಕಳ್ಳತನ ಮಾಡಿಕೊಂಡು ಹೋಗುತ್ತಿದ್ದರಿಂದ ಇಬ್ಬರ ಮೇಲೆ ದೂರು ಕೊಡುತ್ತೇವೆ ಎಂದು ಹೇಳಿದಾಗ ಜಹೀರ್ ಉದ್ದೀನ್ ಖಾನ್ ಗೆ ಎಲ್ಲರು ಸೇರಿ ಹೊಡೆದು ಮತ್ತು ಕಾರ್ತಿಕ್ ನಿಗೆ ಕಣ್ಣಿನ ಬಳಿ ಊದಿಕೊಂಡಿದರಿಂದ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದು ದೂರು ನೀಡುತ್ತೇವೆ ಎಂದು ಅಲ್ಲಿದ್ದ ಜನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದರಿಂದ ಪೊಲೀಸರು ನಮ್ಮನ್ನು ಆಟೋದಲ್ಲಿ ಕಳುಹಿಸಿದರು. ನಂತರ ನಾವು ಕೆ ಆರ್ ಆಸ್ಪತ್ರೆಗೆ ಹೋಗಿರುತ್ತೇವೆ. ಆಗ ಆಸ್ಪತ್ರೆಯಲ್ಲಿ ನನ್ನ ಹೆಸರಿನಲ್ಲಿ ಚೀಟಿ ಬರೆಸಿರುತ್ತೇನೆ. ಡಾಕ್ಟರ್ ಏನಾಯಿತು ಎಂದು ಕೇಳಿದಾಗ ವೈನ್ ಶಾಪ್ ಬಳಿ ಹೊಡೆದರು ಎಂದು ಹೇಳಿರುತ್ತೇನೆ. ವೈದ್ಯರು ಜಹೀರ್ ಉದ್ದೀನ್ ಖಾನ್ ಸತ್ತು ಹೋಗಿದ್ದಾನೆ ಎಂದು ಹೇಳಿದರು. ನನಗೆ ಹೆದರಿಕೆಯಾಯಿತು. ನನಗೆ ಚಿಕಿತ್ಸೆ ನೀಡಿದರು.

ಜಹೀರ್ ಉದ್ದೀನ್ ಖಾನ್ ಸತ್ತು ಹೋಗಿರುತ್ತಾನೆ ಎಂದು ಅಲ್ಲಿದ್ದ ಯಾರಿಗೂ ಒಬ್ಬರಿಗೆ ಹೇಳಿ ನಾನು ಆಸ್ಪತ್ರೆಯಿಂದ ಹೊರಟೆ. ನಂತರ ದೂರು ನೀಡಿದರ ಬಗ್ಗೆ ತಿಳಿದು ಬಂದಿರುತ್ತದೆ. ಗೋಪಾಲ್ ಎನ್ನುವವರು ಮೇಕೆ ಕಳ್ಳತನಕ್ಕೆ ದೂರ ನೀಡಿದ್ದು , ನನ್ನನ್ನು ಅರೆಸ್ಟ್ ಮಾಡಿರುತ್ತಾರೆ ಎಂದು ತಲೆಮರೆಸಿಕೊಂಡಿದ್ದು, ಆ ದಿನ ಪತ್ತೆ ಹಚ್ಚಿರುತ್ತಾರೆ. ನಮ್ಮ ಮೇಲೆ ಹಲ್ಲೆ ಮಾಡಿದ ಆರೋಪಿತರು ಒಬ್ಬರಿಗೊಬ್ಬರು ಕೂಗಾಡಿಕೊಳ್ಳುತಿದ್ದರಿಂದ ಅವರ ಹೆಸರು ನನಗೆ ತಿಳಿದಿರುತ್ತದೆ. ನಂತರ ನಾನು ಆರೋಪಿತರಲ್ಲಿ ಒಬ್ಬ ಆಸಾಮಿ ದ್ವಿಚಕ್ರ ವಾಹನವನ್ನು ನೋಡಿ ಗುರುತಿಸಿರುತ್ತೇನೆ ಮತ್ತು ಜಹೀರ್ ಉದ್ದೀನ್ ಖಾನ್ ನ ಆಟೋ ವನ್ನು ಸಹ ಗುರುತಿಸಿರುತ್ತೇನೆ. ನಾನು ನನ್ನ ಮೇಲೆ ಮಾರಾಣಂತಿಕ ಹಲ್ಲೆ ಮಾಡಿದವರು ಯಾರು ಎಂದು ಗುರುತಿಸಿ, ಅವರ ಹೆಸರು ಶ್ರೀನಿವಾಸ , ಭರತ್ , ರವಿ ಎಂದು ತಿಳಿದು ಬಂದಿರುತ್ತದೆ. ಈ ಬಗ್ಗೆ ಪೊಲೀಸರ ಮಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.6 ಎಂದು ಗುರುತಿಸಲಾಯಿತು.

8. ನಮ್ಮ ಮೇಲೆ ಹಲ್ಲೆ ಮಾಡುತ್ತಿರುವ ದೃಶ್ಯಗಳು ಪಕ್ಕದಲ್ಲಿ ಇದ್ದ ಲಕ್ಷ್ಮೀ ಹೋಟೆಲ್ ನ ಸಿಸಿ ಟಿವಿ ಕ್ಯಾಮಾರದಲ್ಲಿ ರೆಕಾರ್ಡ್ ಆಗಿದ್ದು, ಪೊಲೀಸರು ಅವುಗಳನ್ನು ಪಡೆದುಕೊಂಡು ಪೆನ್ ಡ್ರೈವ್ ಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

9. ಸಾಕ್ಷಿಗೆ ನ್ಯಾಯಾಲಯದ ಕಂಪ್ಯೂಟರ್ ನಲ್ಲಿ ಪೆನ್ ಡ್ರೈವ್ ನಲ್ಲಿ ದೃಶ್ಯಾವಳಿಗಳನ್ನು ತೋರಿಸಿ ತನ್ನನ್ನು ಗುರುತಿಸಲು ಕೇಳಿದಾಗ ಸಾಕ್ಷಿಯೂ ದೃಶ್ಯಾವಳಿಗಳನ್ನು ನೋಡಿ ಗುರುತಿಸಿರುವುದಿಲ್ಲ. ಸದರಿ ಪೆನ್ ಡ್ರೈವ್ ಅನ್ನು ಗುರುತಿಸುವ ಸಲುವಾಗಿ ನಿಪಿ.7 ಎಂದು ಗುರುತಿಸಲಾಯಿತು.

**10.** ಆರೋಪಿತರು ನನಗೆ ಮತ್ತು ಜಹೀರ್ ನಿಗೆ ಹಲ್ಲೆ ಮಾಡಿರುತ್ತಾರೆ, ಆದರಿಂದ ಜಹೀರ್ ತೀರಿಕೊಂಡಿರುತ್ತಾನೆ. ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ ಎಂದು ನುಡಿಯುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**